ಓ. ಎಸ್ . 65/2022 ಪಿ.ಡಬ್ಲ್ಯೂ - 1 ನಾಸಿರಹುಸೇನ ಮಲಕಾರ

**(ದಿನಾಂಕಃ 15-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ಮುಂದುವರೆದ ವಾಟಿ ಸವಾಲು : ಪ್ರತಿವಾದಿ ಪರ ಶ್ರೀ ಎನ್ ಕೆ ಕೊಟಬಾಗಿ ವಕೀಲರಿಂದ -**

1. ಮೀರಾಮಾ ಇವರು 1ನೇ ಪ್ರತಿವಾದಿಯ ಖಾಸ ತಮ್ಮ. ಗೌಸ ಅಲ್ಲಾವುದ್ದೀನ ಮಲಕಾಗಿ ಇವರು ಮೀರಾಮಾ ಇವರಿಗೆ ದೂರದ ಸಂಬಂಧಿ . 2ನೇಪ್ರತಿವಾದಿ ಮೀರಾಮಾ ತಮ್ಮ ಅಲ್ಲಾವುದ್ದೀನನ ಮಗ ಎಂದರೆ ಸರಿಯಲ್ಲ. ಫಾತಿಮಾ , ಮಸ್ತಾನಾ ಈಗ ಜೀವಂತ ಇದ್ದಾರೊ ಇಲ್ಲವೊ ನನಗೆ ಗೊತ್ತಿಲ್ಲ.

2. ಮೀರಾಮಾಳ ಗಂಡ ಮೊಹಮದಅಲಿ ದಿನಾಂಕ 31-12-2009 ರಂದು ಯಮಕನಮರಡಿಯಲ್ಲಿ ತೀರಿಕೊಂಡಿರುತ್ತಾರೆ. ನಾನು ಆಗ ಗೋಕರ್ಣದಲ್ಲಿ ಉಪ ್ಞಜಾನೆ ಆಧಿಕಾರಿ ಆಗಿದ್ದೆ . ಆಗ ಜಾಕಿರಹುಸೇನ ಬೆಳಗಾವಿಯಲ್ಲಿದ್ದರು. ಮೊಹಮದಅಲಿ ಇವರಿಗೆ ಡಯಾಬಿಟಿಸ , ಕಿಡ್ನಿ ಫೆಲ್ಯೂಯರ ಹಾಗೂ ಹಾರ್ಟಿನ ಸಮಸ್ಯೆ ಇತ್ತು. ಅವರು ಡಯಾಲಿಸಿಸನಲ್ಲಿ ಇದ್ದರು. ಗೌಸ ಅಲ್ಲಾವುದ್ದೀನ ನಮ್ಮ ಕಾಕಾನ ಕಾರಿನ ಡ್ರೈವರ ಇದ್ದರು. ಸದರಿ ಕಾರು ನನ್ನ ಹೆಸರಿಗೆ ಇರಲಿಲ್ಲ. 2ನೇ ಪ್ರತಿವಾದಿ ವಿಪಿಸಿ 1357 ರ ಮನೆಯಲ್ಲಿದ್ದ ಎಂದರೆ ಆತ ಪಕ್ಕದ ಮನೆಯಲ್ಲಿ ಇದ್ದನು. ವಿಪಿಸಿ 1357 ರ ಲ್ಲಿ 3 ಮನೆಗಳು ಇದ್ದವು ಎಂದರೆ ನಿಜ. ಆ 3 ಮನೆಗಳ ಪೈಕಿ ಒಂದು ಮನೆಯಲ್ಲಿ 2ನೇ ಪ್ರತಿವಾದಿ ವಾಸವಾಗಿದ್ದ ಎಂದರೆ ನಿಜ. 2ನೇ ಪ್ರತಿವಾದಿ ಮೀರಾಮಾಳನ್ನು ಕರೆದುಕೊಂಡು ಆಸ್ಪತ್ರೆಗೆ ಹೋಗುತ್ತಿದ್ದ ಎಂದರೆ ಸಾಕ್ಷಿ ಆತನನ್ನು ಡ್ರೈವರ ಕೆಸಲಕ್ಕೆ ಹಾಗೂ ಮೀರಾಮಾಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಇಟ್ಟಿದ್ದೆವು ಎಂದು ಹೇಳುತ್ತಾರೆ. ಸದರಿ ಕಾರ ಇಂಡಿಕಾ ಕಾರ ಇದ್ದು ಅದು ನಮ್ಮ ಕಾಕಾನ ಅಕ್ಕನ ಮಗಳ ಹೆಸರಿನಲ್ಲಿ ಇತ್ತು . ಆ ಕಾರಿನ ನಂಬರ ಹೇಳಲು ಬರುವುದಿಲ್ಲ ಅದು ಮಹಾರಾಷ್ಟ್ರದ ಪಾಸಿಂಗ ಕಾರ ಇತ್ತು . ಅವರು ತೀರಿಕೊಳ್ಳುವ 8-10 ವರ್ಷದ ಹಿಂದೆ ಅವರು ಸರ್ವಿಸನಲ್ಲಿ ಇದ್ದಾಗಲೇ ಅದನ್ನು ಖರೀದಿ ಮಾಡಿದ್ದರು.

3. ನಾನು ಆ ಸಮಯದಲ್ಲಿ ಗೋಕರ್ಣದಲ್ಲಿದ್ದೆ , ನನ್ನ ಖಾಸ ಅಣ್ಣ ಜಾಕಿರ ಹುಸ್ಸೇನ ಬೆಳಗಾವಿಯ ಭಾಗ್ಯ ನಗರದಲ್ಲಿದ್ದರು. ಆ ಸಮಯದಲ್ಲಿ ಮೀರಾಮಾ ಒಬ್ಬರೇ ಯ ಮಕನಮರಡಿಯಲ್ಲಿದ್ದರು. ಶನಿವಾರ ಮತ್ತು ರವಿವಾರ ನವಾವು ಬಂದು ಹೋಗುತ್ತಿದ್ದೆವು. ಮೀರಾಮಾ ಯಾವ ಇಸವಿಯಲ್ಲಿ ಗೋಕಾಕಿನ ಉಮರಾಣಿ ಆಸ್ಪತ್ರೆಯಲ್ಲಿ ದಾಖಲ ಆಗಿದ್ದರು ಎಂದು ನನಗೆ ಗೊತ್ತಿಲ್ಲ. ಆಕೆ ಬಿದ್ದು ಆಕೆಯ ಬಲಗಾಲಿನ ಮೊಣಕಾಲ ಮುರಿದಿತ್ತು ( ನೀ ಜಾಯಿಂಟ). ಆಕೆಯನ್ನು 1 ವಾರ ಆಸ್ಪತ್ರೆಗೆ ಆ್ಯಡ್ಮಿಟ ಮಾಡಿದ್ದರು. ಆಕೆ ಆ್ಯಡ್ಮಿಟ ಕಾರ್ಡ ಆಕೆಯ ಮನೆಯಲ್ಲಿ ಇಟ್ಟಿದ್ದೆ . ಅದನ್ನು ನಾನು ತೆಗೆದುಕೊಂಡಿರಲಿಲ್ಲ. ಮೀರಾಮಾ ಇವಳನ್ನು ಗಂಗಾ ಸರ್ಜಿಕಲ ಆ್ಯಂಡ ಫ್ರ್ಯಾಕ್ಚರ ಕ್ಲಿನಿಕ ಗೋಕಾಕನಲ್ಲಿ ಎರಡು ಬಾರಿ ತೋರಿಸಿದ್ದೇವೆ. ಕಾಲಿನ ಸಲುವಾಗಿ ಆಸ್ಪತ್ರೆಯಲ್ಲಿ ಅವಳನ್ನು 2 ಬಾರಿ ತೋರಿಸಿದ್ದೇವೆ. ಗಂಗಾ ಆಸ್ಪತ್ರೆಯಲ್ಲಿ ಅವಳು 2 ಬಾರಿ ಬಟ್ಟಿ ಅವಳು ಮತ್ತೆ ಬೇರೆ ಕಡೆಗೆ ಆ್ಯಡ್ಮಿಟ ಆಗಿರುವುದಿಲ್ಲ. ಮೀರಾಮಾ ಇವಳಿಗೆ

ಬೆನ್ನು ನೋವು ಇದ್ದು ಅವಳು 9-3-2017 ರಂದು ಬೆನ್ನ ನೋವಿಗೆ 3 ದಿನಗಳ ಕಾಲ ಗಂಗಾ ಆಸ್ಪತ್ರೆಯಲ್ಲಿ ಆ್ಯಡ್ಮಿಟ ಆಗಿದ್ದಳು ಎಂದರೆ ನಿಜ. ಮೀರಾಮಾ ಇವಳಿಗೆ ನಾನು ಆಸ್ಪತ್ರೆಗೆ ತೋರಿಸಿಲ್ಲ ಹಾಗೂ ಅವಳ ಆಸ್ಪತ್ರೆಯ ಬಿಲ್ಲು ಕಟ್ಟಿಲ್ಲ ಎಂದರೆ ಸಾಕ್ಷಿ ಮೀರಾಮಾಳೆ ಆಸ್ಪತ್ರೆಯ ಬಿಲ್ಲು ಕೊಟ್ಟಿದಾಳೆ ಎಂದು ಹೇಳುತ್ತಾರೆ. ಮೀರಾಮಾ ಇವಳಿಗೆ ಏನು ಆಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅವಳಿಗೆ ಹಿಪ್ ಜಾಯಿಂಟ ಮುರಿದಿತ್ತು , ಆಕಾರಣಕ್ಕೆ ಆಸ್ಪತ್ರೆಗೆ ಆ್ಯಡ್ಮಿಟ ಆಗಿದ್ದರು ಎಂದರೆ  ಸರಿಯಲ್ಲ.

4. ನಾನು ಈಗ  ಇವರ ಡಿಸ್ಚಾರ್ಜ ವರದಿ ನೋಡುತ್ತಿದ್ದೇನೆ , ಅದರಲ್ಲಿ ಹಿಪ್ ಜಾಯಿಂಟ ಮುರಿದಿತ್ತು ಎಂದು ಬರದಿದ್ದಾರೆ ಎಂದರೆ ನಿಜ. ಆಕೆಯ ಹಿಪ್ ಜಾಯಿಂಟ ಗೆ ಪ್ಲೇಟ ಹಾಕಿ ಫಿಟ್ ಮಾಡಿದ್ದರು ಎಂದರೆ ನಿಜ.

5. ವಿಪಿಸಿ 1567 ಪೂರ್ವ ಪಶ್ಚಿಮ 60 ಅಡಿ ಹಾಗೂ ದಕ್ಷಿಣ ಉತ್ತರ  60 ಅಡಿ ಜಾಗ ಇದೆ ಎಂರ ನಿನಿ ನಿಜ.  ಅಲ್ಲಿ 3 ಮನಗೆಳನ್ನು ಕಟ್ಟಿ ಪ್ರತಿ ಮನೆಗಳ ಹಿಂದೆ 15 ಅಡಿ ಜಾಗ ಖುಲ್ಲಾ ಬಿಟ್ಟಿದ್ದಾರೆ ಎಂದರೆ ನಿಜ. ಮಹಮ್ಮದಅಲಿ ಇವರ ಮನೆ ಬಿಟ್ಟು 5-6 ಮನೆಗಳ ನಂತರ ನಮ್ಮ ಮನೆ ಇದೆ ಎಂದರೆ ಸರಿಯಲ್ಲ.  ಅವರ ಮನೆಯ ಪಕ್ಕಕ್ಕೆ ನಮ್ಮ ಮನೆ ಇದೆ ಎಂದು ಹೇಳುತ್ತಾರೆ.  ಸದರಿ ಮನೆ ಪೂರ್ವ ಪಶ್ಚಿಮ 60 ಅಡಿ ಹಾಗೂ ದಕ್ಷಿಣ ಉತ್ತರ  30 ಅಡಿ ಇದೆ. ಸದರಿ ಮನೆಯಲ್ಲಿ ಅಡಿಗೆ ಮನೆ ಮತ್ತು ಮತ್ತೊಂದು ಪಾರ್ಟ ಇರುತ್ತದೆ. ನಮ್ಮ ಮನೆ ಅಂದಾಜು ಕಿಮ್ಮತ್ತು 10,00,000/- ಇದೆ. ಮೀರಾಮಾ ಇವರ ಮನೆ ರೂ. 60,00,000/- ಕಿಮ್ಮತ್ತು ಇದೆ ಎಂರದೆ ಸರಿಯಲ್ಲ. ಸದರಿ ಮನೆ ರೂ. 20,00,000/- ಇರಬಹುದು. ಮೀರಾಮಾ ಇವಳ ಮನೆ ಅವಳು ಸಾಯುವ ಸಮಯದಲ್ಲಿ ರೂ. 20,00,000/- ಕಿಮ್ಮತ್ತು ಇತ್ತು ಎಂದರೆ ಸರಿಯಲ್ಲ. ಮೀರಾಮಾ ಇವಳ ಮನೆ ಅವಳು ಸಾಯುವ ಸಮಯದಲ್ಲಿ ರೂ. 26,00,000/- ಕಿಮ್ಮತ್ತು ಇತ್ತು ಎಂದರೆ ಸರಿಯಲ್ಲ.  ಮೀರಾಮಾ ಇವಳಿಗೆ ಸೇರಿದ ಮತ್ತೊಂದು ಮನೆ ರಂಗಸ್ವಾಮಿ ಕ್ಯಾಂಪ ಹಿಡಕಲ ಡ್ಯಾಂ ನಲ್ಲಿ ಇದೆ ಎಂದರೆ ನಿಜ. ಆ ಮನೆ ಕಿಮ್ಮತ್ತು ಈಗ ರೂ. 5,00,000/- ಇದೆ.

6. ಶೌಕತಹುಸೆನ ಖಾಜಿ, ರಾಜೆಸಾಬ ಘನಿಬಂದ, ಕುತುಬುದಿನ ಬೇಪಾರಿ ಇವರು ನನಗೆ ಗೊತ್ತಿಲ್ಲ. ಇವರ ಪರಿಯ ಇಲ್ಲ. ನಮ್ಮ ಜಮಾತನ ಅಧ್ಯಕ ಯಾರು ಇದಾದರೆ ಎಂದು ನನಗೆ ಗೊತ್ತಿಲ್ಲ. ಯಮಕನಮರಡಿಯಲ್ಲಿರುವ ನಮ್ಮ ಮನೆಯನ್ನು ಈಗ ಬಾಡಿಗೆ ಕೊಟ್ಟಿದ್ದೇನೆ. ಬಾಡಿಗೆ ಕೊಟ್ಟು 5-6 ವರ್ಷ ಆಯಿತು. ಮೀರಾಮಾ ಇವರಿಗೆ ಸೀರಿಯಸ ಇದ್ದಾಗ ನಾನು ಗೋಕರ್ಣದಲ್ಲಿ ಇದ್ದೆ ಎಂದರೆ ನಿಜ.  ಆ ಸಮಯದಲ್ಲಿ ಆಕೆಯ ಜೊತೆಗೆ ಮೊಹದಅಲಿ , ಶಬ್ಬೀರ ಬಾಗವಾಲಿ ಇದ್ದರು. ಮೀರಾಮಾ ಇವಳನ್ನು ಮೊದಲು ಸಂಕೇಶ್ವರಕ್ಕೆ ಕರೆದುಕೂಡು ಹೋಗಿದ್ದರು ಅಲ್ಲಿಂದ ವಾಪಸ ಗೋಕಾಕ ಆಸ್ಪತ್ರೆಗೆ ಕರೆದುಕೊಂಡು ಹೋದರು. ಗೋಕಾಕನಿಂದ ವಾಪಸ ಬರುವಾಗ ಅವರು ತೀರಿಕೊಂಡರು. ಈ ವಿಚಾರವನ್ನು ನನಗೆ ಮೋಲೆ ಹೇಳಿದವರು ಫೋನ ಮೂಲಕ ಆಕಯನ್ನು ಕರೆದುಕೊಂಡ ಹೋಗುತಿದ್ದೇವೆ ಎಂದು ಹೇಳಿದರು. ಆಕೆಯ

ಆಸ್ಪತ್ರೆ ಬಿಲ್ಲಬ್ನ 2ನೇ ಪ್ರತಿವಾದಿ ತುಂಬಿದ್ದಾರೆ ಎಂದರೆ ಸರಿಯಲ್ಲ.ಆನತನ ಬಳಿ ದುಡ್ಡು ಇರಲಿಲ್ಲಎಂದು ಹೇಳುತ್ತಾರೆ. ಮೀರಾಮಾ ಮೊಹಮದಲಿ ನಂದಿ ಕ್ರೆಡಿಟಿ ಸೊಸೈಟಿಯಿಂದ ರೂ. 5,00,000/- ಹಣವನ್ನು ಸಾಲವಾಗಿ ಪಡೆದಿದ್ದಾರೆ ಎಂದರೆ ಸರಿಯಲ್ಲ.

**( ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ವಾಟೀ ಸವಾಲನ್ನು ಮುಂದೂಡಲಾಯಿತು)**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**